ಅ) ಸರ್ಕಾರವು 2014–15ನೇ ಸಾಲಿನ ಆಯವ್ಯಯದಲ್ಲಿ ವಿಶೇಷ ವರ್ಗದವರಿಗಾಗಿ 10,000 ಮನೆಗಳನ್ನು ನಿರ್ಮಿಸುವ ಗುರಿ ಹೊಂದಲಾಗಿದೆ.

ಆ) ಮತ್ತು ಇ) ವಿಶೇಷ ವರ್ಗದ ಫಲಾನುಭವಿಗಳ ಸರ್ವೆ ಕಾರ್ಯ ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಇನ್ನೂ ಪ್ರಗತಿಯಲ್ಲಿದ್ದು ಹೆಚ್ಚಿನ ಸಮಯದ ಅವಶ್ಯಕತೆ ಇರುವುದರಿಂದ ಸರ್ವೆ ಕಾರ್ಯ ಪೂರ್ಣಗೊಳಿಸಲು 31.12.2014ರವರೆಗೆ ಕಾಲಾವಕಾಶವನ್ನು ವಿಸ್ತರಿಸಲಾಗಿದೆ.

ಸರ್ವೆ ಕಾರ್ಯ ಇನ್ನು ಪ್ರಗತಿಯಲ್ಲಿರುವ ಹಿನ್ನೆಲೆಯಲ್ಲಿ ಅದು ಸಂಪೂರ್ಣಗೊಂಡ ನಂತರ ನಿವೇಶನ ಹೊಂದಿರುವವರ ಮತ್ತು ಹೊಂದದೆ ಇರುವವರ ಸ್ಪಷ್ಟ ಮಾಹಿತಿ ಲಭ್ಯವಾಗುವುದು.

ರೈಲ್ವೆ ಕಾಮಗಾರಿಗಳು

214 (29), ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗ)

ಅ) ರಾಜ್ಯದ ಯಾವ ಯಾವ ರೈಲ್ವೆ ಮಾರ್ಗಗಳಿಗೆ ರಾಜ್ಯದಿಂದ ಹಣ ಮತ್ತು ಭೂಮಿಯನ್ನು ನೀಡಲಾಗುತ್ತಿದೆ; (ವಿವರಗಳನ್ನು ನೀಡುವುದು)

ಆ) ಈ ಪೈಕಿ ಯಾವ ಯಾವ ರೈಲ್ವೆ ಕಾಮಗಾರಿಗಳನ್ನು ಈಗಾಗಲೇ ಪ್ರಾರಂಭಿಸಲಾಗಿದೆ; ಯಾವ ಕಾಮಗಾರಿಗಳು ಸಂಪೂರ್ಣಗೊಂಡಿವೆ; ಪ್ರಾರಂಭಿಕ ಹಂತದಲ್ಲಿರುವ ಕಾಮಗಾರಿಗಳು ಯಾವುವು; (ಕಾಮಗಾರಿಗಳ ವಿವರ ನೀಡುವುದು)?

ಶ್ರೀ ಆರ್. ರೋಷನ್‌ಬೇಗ್ (ಮೂಲಸೌಲಭ್ಯ ಅಭಿವೃದ್ಧಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಸಚಿವರು)

ಅ) I. ರೈಲ್ವೆ ಯೋಜನೆಗಳಿಗೆ ಯೋಜನಾ ವೆಚ್ಚವನ್ನು ಈ ಕೆಳಕಂಡಂತೆ ಭರಿಸಲಾಗುತ್ತಿದೆ

ಕ್ರ. ಸಂ.	ಯೋಜನೆ ಹೆಸರು	ರಾಜ್ಯ	ಕೇಂದ್ರ
1	ರಾಮನಗರ–ಮೈಸೂರು	2/3	1/3
2	ಕೊಟ್ಟೂರು–ಹರಿಹರ	2/3	1/3
3	ಹಾಸನ–ಬೆಂಗಳೂರು	50	50
4	ಬೀದರ್–ಗುಲ್ಬರ್ಗಾ	50	50
5	ಮುನಿರಾಬಾದ್–ಮೆಹಬೂಬ್‌ನಗರ	50	50
6	ತುಮಕೂರು–ರಾಯದುರ್ಗ	50	50

II. ಯಾದಗಿರಿಯಲ್ಲಿ ಸ್ಥಾಪಿಸಿರುವ ರೈಲ್ವೆ ಫಿಯೆಟ್ ಕಾರ್ಖಾನೆಗೆ ಜಮೀನನ್ನು ಮಾತ್ರ ರಾಜ್ಯ ಸರ್ಕಾರದಿಂದ ಉಚಿತವಾಗಿ ನೀಡಲಾಗಿದೆ. ಯೋಜನಾ ವೆಚ್ಚವನ್ನು ಸಂಪೂರ್ಣವಾಗಿ ಕೇಂದ್ರ ಸರ್ಕಾರವು ಭರಿಸುತ್ತದೆ.

III. ಈ ಯೋಜನೆಗಳ ಶೇ.50 ರಷ್ಟು ಯೋಜನಾ ವೆಚ್ಚ ಹಾಗೂ ಯೋಜನೆಗೆ ಅಗತ್ಯವಿರುವ ಭೂಮಿಯನ್ನು ಉಚಿತವಾಗಿ ನೀಡಲಾಗುತ್ತಿದೆ.

1. ಚಿಕ್ಕಮಗಳೂರು–ಸಕಲೇಶಪುರ
2. ಕುಡಚಿ–ಬಾಗಲಕೋಟೆ
3. ಗದಗ–ವಾಡಿ ಹೊಸ ರೈಲು ಮಾರ್ಗ
4. ಬೆಂಗಳೂರು–ಚಾಮರಾಜನಗರ ಹೊಸ ರೈಲು ಮಾರ್ಗ
5. ಕೋಲಾರ ಕೋಚ್ ಕಾರ್ಖಾನೆ

ಆ) ಎ) ಈಗಾಗಲೇ ಪ್ರಾರಂಭಿಸಲಾದ ರೈಲ್ವೆ ಕಾಮಗಾರಿಗಳ ವಿವರ ಈ ಕೆಳಗಿನಂತಿದೆ.

1. ರಾಮನಗರ–ಮೈಸೂರು
2. ಹಾಸನ–ಬೆಂಗಳೂರು
3. ಬೀದರ್–ಗುಲ್ಬರ್ಗಾ

4. ಮುನಿರಾಬಾದ್–ಮೆಹಬೂಬ್‌ನಗರ
5. ತುಮಕೂರು–ರಾಯದುರ್ಗ
6. ಚಿಕ್ಕಮಗಳೂರು–ಸಕಲೇಶಪುರ
7. ಕುಡಚಿ–ಬಾಗಲಕೋಟೆ

ಬಿ) ಪೂರ್ಣಗೊಂಡಿರುವ ರೈಲ್ವೆ ಮಾರ್ಗಗಳ ವಿವರ ಈ ಕೆಳಕಂಡಂತಿದೆ.

ಕ್ರ.ಸಂ.	ರೈಲ್ವೆ ಮಾರ್ಗದ ಹೆಸರು	ಅನುಷ್ಠಾನಗೊಂಡ ದಿನಾಂಕ
1	ಕೊಟ್ಟೂರು–ಹರಿಹರ ರೈಲ್ವೆಮಾರ್ಗ	03.03.2014
2	ಕಡೂರು–ಚಿಕ್ಕಮಗಳೂರು	03.10.2013
3	ಕೋಲಾರ–ಚಿಕ್ಕಬಳ್ಳಾಪುರ	08.11.2013

ಸಿ) ಪ್ರಾರಂಭಿಕ ಹಂತದಲ್ಲಿರುವ ರೈಲ್ವೆ ಕಾಮಗಾರಿಗಳ ವಿವರ ಈ ಕೆಳಕಂಡಂತಿರುತ್ತದೆ.

1. ಗದಗ–ವಾಡಿ ಹೊಸ ರೈಲು ಮಾರ್ಗ
2. ಬೆಂಗಳೂರು–ಚಾಮರಾಜನಗರ ಹೊಸ ರೈಲು ಮಾರ್ಗ
3. ಕೋಲಾರ ಕೋಚ್ ಕಾರ್ಖಾನೆ